

ನಗು, ದೇವಸ್ಥಾನ ಸುತ್ತುವಾಗ ಸಿಕ್ಕ ಅರೆಕ್ಷಣದ ಏಕಾಂತ, ಕಾಲೇಜಿನ ವಾರ್ಷಿಕೋತ್ಸವದಲ್ಲಿ ವಿಶೇಷ ಉಡುಗೆಯಲ್ಲಿ ಹೇಗಿದೆ ಎಂಬ ಸನ್ನೆಯ ಸಂಭಾಷಣೆ, ಬಸ್ಸಿನಲ್ಲಿ ಅಚಾನಕ್ಕಾಗಿ ಅಕ್ಕಪಕ್ಕದ ಸೀಟು ಸಿಕ್ಕಾಗಲೇ ಮುದುಕ ಬಂದು ಎಬ್ಬಿಸಿದಾಗ ಅನುಭವಿಸಿದ ಚಡಪಡಿಕೆ – ಹೀಗೆ ಮುಟ್ಟಿಯೂ ಮುಟ್ಟದ ಹಾಗೆ, ಮುಟ್ಟಿದರೆ ಮುನಿವ ಹಾಗೆ ಮುಂದುವರಿವ ಪ್ರೇಮಕ್ಕೆ ಅಗಲಿಕೆ ಹತ್ತಿಯಲಗು ಬೀಸಿದಾಗ ವಿರಹದ ಉರಿಗೆ ಮತ್ತೆ ವರವಾಗುವುದು ಪತ್ರವೇ.

## ಹಿಂದಿನವರ ಪ್ರೇಮದ ಪರಿ


ಈ ತಲೆಮಾರಿನವರಿಗಿಂತ ಹಿಂದಿನವರಿಗಂತೂ ಪ್ರೇಮವೆಂಬುದು ಇನ್ನಷ್ಟು ಕಗ್ಗಂಟು. ಮದುವೆಗೆ ಮುಂಚಿನ ಪತ್ರ ವ್ಯವಹಾರದ ಮಾತುಗಳಿರಲಿ, ಅಪ್ಪ ಅಮ್ಮ ತೋರಿಸಿದವರ/ಳನ್ನು ವರಿಸಿ, ದಾಂಪತ್ಯ ಶುರುಮಾಡಿದ ಮೇಲೂ ಪ್ರೇಮವೆಂಬುದು ಟೇಕಾಫ್ ಆಗುವ ಅವಕಾಶ ಇರುತ್ತಿರಲಿಲ್ಲ. ಬಹುತೇಕ ಕೂಡು ಕುಟುಂಬಗಳಲ್ಲಿ ಗಂಡ ಹೆಂಡತಿಗೆ ಏಕಾಂತ ವಿಹಾರದ ಅನುಭವ ಒತ್ತಟ್ಟಿಗಿರಲಿ, ಹಗಲು ಹೊತ್ತಲ್ಲಿ ಒಟ್ಟಿಗೆ ಕೂತು ಮಾತಾಡುವುದೂ ಪಾಪಕೃತ್ಯ ಎಂದೇ ಗಣಿಸಲಾಗುತ್ತಿತ್ತು. ರಾತ್ರಿ ದೇಹಗಳು ಕೂಡಿಕೊಂಡರೂ ಮನಸ್ಸುಗಳು ಬೆರೆಯಲು ಎಷ್ಟೋ ವರ್ಷಗಳು ಕಾಯಲೇಬೇಕಿತ್ತು.

ಅದರಲ್ಲಿಯೂ ಹೆಣ್ಣುಮಕ್ಕಳು ತಮ್ಮ ಪ್ರೇಮದ ಆಸೆಯನ್ನು ವ್ಯಕ್ತಪಡಿಸುವುದು ಇವತ್ತಿಗೂ ತುಂಬ ಕಡೆಗಳಲ್ಲಿ ಶಿಕ್ಷಾರ್ಹ ಅಪರಾಧ ಎಂಬ ಭಾವನೆಯೇ ಇದೆ. ನಮ್ಮ ಪುರಾಣ ಮಹಾಕಾವ್ಯಗಳನ್ನೇ ತೆಗೆದುಕೊಳ್ಳಿ. ರಾಜ, ಗಂಧರ್ವ, ದೇವ ಯಾರೇ ಆಗಿರಲಿ... ವಿಹಾರಕ್ಕೆ ಹೋದಾಗ, ಬೇಟೆಯಲ್ಲಿ ತೊಡಗಿದಾಗ, ರಾಜಕಾರ್ಯದಲ್ಲಿರುವಾಗ ದಾರಿಯಲ್ಲೋ ಕಾಡಿನಲ್ಲೋ ಒಂದು ಚಂದದ ಹುಡುಗಿ ಕಂಡು ಮನಸೋತು ವರಿಸಿದ ಉದಾಹರಣೆಗಳು ಮೊಗೆಮೊಗೆದು ಕೊಡಬಹುದು. ಆದರೆ ಅದೇ ಹೆಣ್ಣೊಬ್ಬಳು ಗಂಡಿನ ಮೇಲೆ ಮೋಹಿತಳಾಗಿ ಪ್ರೇಮನಿವೇದನೆ ಮಾಡಿಕೊಂಡ ಉದಾಹರಣೆಗಳು ಎಷ್ಟಿವೆ? ರಾಮನನ್ನು ಕಂಡು ಮೋಹಗೊಂಡು ಪ್ರೇಮನಿವೇದನೆ ಮಾಡಿಕೊಂಡ ಶೂರ್ಪನಖಿಯ ಗತಿ ಏನಾಯ್ತು ಗೊತ್ತಲ್ಲ? ಬಹುಶಃ ಹೆಣ್ಣೊಬ್ಬಳು ನಾಚಿಕೆಬಿಟ್ಟು ಪ್ರೇಮನಿವೇದನೆ ಮಾಡಿದಳು ಎಂಬ ಕಾರಣಕ್ಕೇ ಅವಳನ್ನು ರಾಕ್ಷಸಿಯಾಗಿ ಚಿತ್ರಿಸಿರಲಿಕ್ಕೂ ಸಾಕು.

ಮಹಾಭಾರತದ ಅಂಬೆಯ ಕಥೆ ನೆನಪಿಸಿಕೊಳ್ಳಿ. ಅತ್ತ ಮನಕೊಟ್ಟ ರಾಜನನ್ನೂ ವರಿಸಲಾಗದೆ, ಇತ್ತ ಗೆದ್ದು ಬಂದ ಭೀಷ್ಮನನ್ನೂ ಕೂಡಲಾಗದೆ ಅಗ್ನಿಯೇ ಅಂತಿಮಗತಿಯಾಯಿತಲ್ಲವೇ? ಹಾಗೆ ನೋಡಿದರೆ ಭೀಮನೇ ಎಷ್ಟೋ ವಾಸಿ. ತನ್ನನ್ನು ಮೋಹಿಸಿದ ರಾಕ್ಷಸಿ ಹಿಡಿಂಬಿಯನ್ನು ಒಪ್ಪಿ ಒಬ್ಬ ಸಂತಾನಪಡೆಯುವವರೆಗಾದರೂ ಜೊತೆಗಿದ್ದು ರಮಿಸಿದ.

# ಸಂಬಂಧಗಳ ಆಪ್ತತೆ ಹೆಚ್ಚಿದೆ

‘ಓ ಮೇಘವೇ ಮೇಘವೇ ಹೋಗಿ ಬಾ, ಈ ಓಲೆಯ ಅವಳಿಗೆ ನೀಡಿ ಬಾ’ ಎಂಬ ಸಿನಿಮಾ ಹಾಡು ಕೇಳಿದಾಗಲೆಲ್ಲ ನಾಯಕ ನಟ ತನ್ನ ಪ್ರೇಮನಿವೇದನೆಯನ್ನು ಪ್ರಿಯತಮೆಗೆ ತಿಳಿಸಲು ಮೋಡದ ಸಹಾಯವನ್ನು ಕೋರುವ ಸುಂದರ ಕಲ್ಪನೆ ನಮ್ಮನ್ನು ಮುದಗೊಳ್ಳುವಂತೆ ಮಾಡುತ್ತದೆ.



ಮೋಡವನ್ನು ಪ್ರೇಮ ಸಂದೇಶಕ್ಕೆ ಮೊದಲು ಬಳಸಿದ್ದು ಕಾಳಿದಾಸ. ತನ್ನ ‘ಮೇಘದೂತ’ ಕಾವ್ಯದಲ್ಲಿ ಮೋಡಗಳ ಮೂಲಕ ಪ್ರೇಮ ಸಂದೇಶ ಕಳಿಸುವ ಅವನ ಅದ್ಭುತ ಕಲ್ಪನೆ ನನಗೆ ಸದಾ ಬೆರಗು ಹುಟ್ಟಿಸುತ್ತದೆ. ಮೇಘದೂತ ಕಾವ್ಯ ರಚಿಸಿ ಅನೇಕ ಪ್ರೇಮಿಗಳಿಗೆ ಉಚಿತವಾಗಿ ಪೋಸ್ಟ್ ಮ್ಯಾನ್ ಒದಗಿಸಿಕೊಟ್ಟ ಪುಣ್ಯ ಕಾಳಿದಾಸನದು.

ಕಾಲ ಕಳೆದಂತೆ ಪಾರಿವಾಳಗಳ ಕಾಲಿಗೆ ಪತ್ರ ಕಟ್ಟಿ ಸಂದೇಶ ರವಾನಿಸುವ ಅಭ್ಯಾಸ ಬೆಳೆದು ಬಂತು. ನಂತರದ ದಿನಗಳಲ್ಲಿ ಪೋಸ್ಟ್ ಆಫೀಸುಗಳ ಜಮಾನ ಶುರುವಾಗಿ ಅನೇಕ ಪ್ರೇಮಿಗಳ ಪಾಲಿಗೆ ಪೋಸ್ಟ್ ಮ್ಯಾನ್ ದೇವದೂತನಾಗಿಬಿಟ್ಟ. ಯಾರಿಗೂ ಕಾಣದಂತೆ ಪ್ರೇಮ ಪತ್ರಗಳನ್ನು ಗುಪ್ತವಾಗಿ ರವಾನೆ ಮಾಡುವುದು ಅವನ ಹೊಸ ಕರ್ತವ್ಯವಾದ ಉದಾಹರಣೆಗಳೂ ಉಂಟು. ಇದನ್ನೇ ಕಥೆಯಾಗಿಸಿಕೊಂಡ ಅನೇಕ ಸಿನಿಮಾಗಳು ಕೂಡಾ ಸೂಪರ್ ಹಿಟ್ ಆಗಿವೆ.

ಜಗತ್ತು ಬೆಳೆಯುತ್ತ ಬಂದಂತೆ ಈಗಿನ ಯುವಜನರು ಮೋಡದಲ್ಲಿ ಸಂದೇಶ ಕಳಿಸುವ ಕಾಳಿದಾಸನ ಕಲ್ಪನೆಯನ್ನು ಓದಿ ಇದು ಸಾಧ್ಯವೇ ಎಂದು ನಗುತ್ತಿದ್ದಾಗಲೇ ಕ್ಲೌಡ್ ತಂತ್ರಜ್ಞಾನ ಬಂದು ಕಾಗದ, ಪೆನ್ನು, ಪೇಪರುಗಳನ್ನು ಮೂಲೆಗುಂಪಾಗಿಸಿ ಮೊಬೈಲ್, ವಾಟ್ಸ್ಆ್ಯಪ್, ಫೇಸ್‌ಬುಕ್‌ಗಳು ಜಗತ್ತನ್ನು ತುದಿ ಬೆರಳಿಗೆ ತಂದಿಟ್ಟಿತು. ಈಗ ನಾವೆಲ್ಲಾ ಅಕ್ಷರಶಃ ಮೇಘ ಸಂದೇಶ ಕಳಿಸುವವರಾಗಿದ್ದೇವೆ.

ಕಾಗದ ಬರೆದು ಅದನ್ನು ಯಾರಿಗೂ ಕಾಣದಂತೆ ಪೋಸ್ಟ್ ಮಾಡಿ ಅದು ಬರೆದವರಿಗೆ ತಲುಪಿತೋ ಇಲ್ಲವೋ ಎಂದು ಯೋಚಿಸುತ್ತಾ ಕೂರುವ ಕಾತರ, ಚಡಪಡಿಕೆಯನ್ನು ಕ್ಷಣಮಾತ್ರದಲ್ಲಿ ಕಳಿಸುವ ವಾಟ್ಸ್ಆ್ಯಪ್ ಮೆಸೇಜ್ ನಿವಾರಿಸಿದೆ. ಹುಡುಗನೋ ಹುಡುಗಿಯೋ ಹೇಗಿದ್ದಾರೋ, ಏನು ಮಾಡುತ್ತಿದ್ದಾರೋ ಎಂದು ಚಿಂತಿಸಿ ತಲೆ ಮೇಲೆ ಕೈ ಹೊತ್ತು ಕೂರುತ್ತಿದ್ದ ಸಮಯ ಬದಲಾಗಿ ಪರಸ್ಪರ ಇಬ್ಬರಿಗೂ ಕ್ಷಣ ಕ್ಷಣದ ಮಾಹಿತಿ ರವಾನೆಯಾಗುತ್ತಿದೆ.

ನಮ್ಮ ಕಾಲದಲ್ಲಿ ಹೀಗಿರಲಿಲ್ಲ, ಈಗಿನವರದೆಲ್ಲ ಇನ್‌ಸ್ಟಂಟ್ ಪ್ರೀತಿ ಅಂತ ಕೆಲವರು ಹೀಗೆಳೆಯುತ್ತಿರುವಾಗ ಅನಿಸುವುದು ‘ನಿಜಕ್ಕೂ ಪ್ರೀತಿ ಜಾಳಾಗಿದೆಯಾ?’ ಇಲ್ಲ. ಸಂವಹನ ಬದಲಾದಂತೆ ಸಂಬಂಧಗಳ ಆಪ್ತತೆ ಹೆಚ್ಚಿದೆ. ಕಾತರ ಚಡಪಡಿಕೆಯನ್ನು ಬದಿಗಿರಿಸಿ ಆ ಜಾಗವನ್ನು ಪ್ರೀತಿಯೇ ತುಂಬಿದೆ.

ಸ್ವಾತಿ ಕೆ.ಎಚ್.